ಶ್ರೀ ಎಸ್. ಬಂಗಾರಪ್ಪ.-- ಎಲ್ಲರೂ ಸೇರಿ ಸುಮ್ಮನೆ ಕುಳಿತುಕೊಳ್ಳೋಣವೇ ? ನಾವೂ ನೀವು ಎಲ್ಲಾ ಸೇರಿ ಸರ್ಕಾರ ಕೊಡುವವರೆಗೆ ಸುಮ್ಮನೆ ಕುಳಿತುಕೊಳ್ಳೋಣವೇ

ಶ್ರೀ ಜಿ. ರಾಜುಗೌಡ.— ನನಗೂ ಹೇಳಿಕೆಯ ಪ್ರತಿ ಬಂದಿಲ್ಲ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.-- ನನಗೆಗೂ ಹೇಳಿಕೆಯ ಪ್ರತಿ ಬಂದಿಲ್ಲ ?

ಅಧ್ಯಕ್ಷರು.-- ಮಾನ್ಯ ಜಿಗಜಿಣಗಿಯವರೇ, ಮಾನ್ಯ ಸದಸ್ಯರು ಏನು ವಿಷಯದ ಬಗ್ಗೆ ಗಮನ ಸೆಳೆಯುತ್ತಾರೆ ಆ ಬಗ್ಗೆ ತಪ್ಪು ಉತ್ತರದ ನಕಲು ಪ್ರತಿಯೇನು ಅವರಿಗೆ ಒದಗಿಸುವುದು ನಿಮ್ಮ ಕರ್ತವ್ಯ. ಅವರಿಗೆ ನಕಲು ಪ್ರತಿಗಳನ್ನು ಸರಬರಾಜು ಮಾಡಿ.

ಶ್ರೀ ರಮೇಶ್ ಜಿಗಜಿಣಗಿ.-- ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಕೆ. ಎಚ್ ಪಾಟೀಲ್.-- ಅಧ್ಯಕ್ಷರೇ, ಒಬ್ಬ ಮಂತ್ರಿಯವರು ಹೇಳಿದ್ದನ್ನು ಇನ್ನೊಬ್ಬ ಮಂತ್ರಿಯವರು ಹೇಳುತ್ತಾರೆ. ಯಾವುದೇ ಮಂತ್ರಿಯವರು ತೆಗೆದುಕೊಳ್ಳತಕ್ಕದ್ದನ್ನು ಮಾನ್ಯ ಲಕ್ಷ್ಮೀ ಸಾಗರ್ ಅವರು, ಎಂದರೆ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ತೆಗೆದುಕೊಳ್ಳುತ್ತಾರೆ. ಇವೊತ್ತು ಏನು ಸುಳ್ಳು ಜಾತಿ ಪ್ರಮಾಣ ಪತ್ರಗಳ ಬಗ್ಗೆ ಗಮನ ಸೆಳೆದಿದ್ದೇವೆ ಇದರ ಬಗ್ಗೆ ಸಂಬಂಧ ಪಟ್ಟ ಮಂತ್ರಿಗಳು ಇಲ್ಲದಿದ್ದರೆ ಬೇರೆಯವರು ಆ ಬಗ್ಗೆ ಉತ್ತರ ಕೊಡಲು ಏನು ಹಕ್ಕತ್ ಆಗುತ್ತದೆ ? Shall we delay the matter. Is it not really consuming lot of time of this House

ಅಧ್ಯಕ್ಷರು.--ಮಾನ್ಯ ಲಕ್ಷ್ಮೀಸಾಗರ್ ಅವರೇ, ನೀವು ಸಂಸದೀಯ ವ್ಯವಹಾರಗಳ ಖಾತೆಯನ್ನು ವಹಿಸಿಕೊಂಡಿದ್ದೀರಿ. ನೀವು ಎಲ್ಲಾ ಮಂತ್ರಿಗಳಿಗೆ ಇದನ್ನು ಹೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.-- ಇದನ್ನು ನಾನು ಒಪ್ಪಿಕೊಳ್ಳುತ್ತೇನೆ.
ಅಧ್ಯಕ್ಷರು.-- ನಾಳೆಯಿಂದ ಈ ರೀತಿ ಆಗಬಾರದು.

ನಿಯಮ ೩೭ರ ಕೆಳಗೆ ಚರ್ಚೆ

(i) ಅಫಜಲ್‌ಪುರ ತಾಲ್ಲೂಕು ಗಾಣಗಾಪುರದಲ್ಲಿ ಭೀಮಾನದಿಯ ಹತ್ತಿರ ಸ್ನಾನ ಘಟ್ಟಗಳನ್ನು ನಿರ್ಮಿಸುವುದು

ಶ್ರೀ ಮಾಲಿಕಯ್ಯ ವಿ ಗುತ್ತೇದಾರ್.-- ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯ ಅಫಜಲ್‌ಪುರ ತಾಲ್ಲೂಕು ಗಾಣಗಾಪುರದಲ್ಲಿ ಭೀಮಾನದಿಯು ಸಮೀಪ ಇರುವ ಶ್ರೀ ದತ್ತಾತ್ರೇಯ ದೇವಸ್ಥಾನಕ್ಕೆ ಅಸಂಖ್ಯಾತ ಭಕ್ತಾದಿಗಳು ಎಲ್ಲಾ ಕಡೆಯಿಂದಲೂ ಬರುತ್ತಿದ್ದು ಅಲ್ಲಿ ಸ್ನಾನ ಘಟ್ಟವಿಲ್ಲದೆ ಭಕ್ತಾದಿಗಳ ರಕ್ಷಣೆಯಿಲ್ಲದ ಭೀಮಾನದಿಯಲ್ಲಿ ಸ್ನಾನ ಮಾಡಬೇಕಾಗಿದ್ದು ಅನೇಕ ದುರ್ಘಟನೆಗಳೂ ಹಿಂದೆ ಸಂಭವಿಸಿದೆ. ಹಿಂದಿನ ಸರಕಾರದವರು ಅಲ್ಲಿನ ಪಿದಾನದ ಧರ್ಮಶಾಲೆಯ ಎದುರಿನಲ್ಲಿ ಇಂದು ಸ್ನಾನ ಘಟ್ಟವನ್ನು ನಿರ್ಮಿಸುವ ಸಲುವಾಗಿ ಅಂದಾಜನ್ನು ತಯಾರಿಸುವ ಬಗ್ಗೆ ಆದೇಶ ನೀಡಿದ್ದರು. ಅಂತೆಯೇ ಅಂದಾಜು ತಯಾರಾಗಿ ಗುಲ್ಬರ್ಗಾ ಸೂಪರಿಂಟೆಂಡಿಂಗ್ ಇಂಜಿನಿಯರ್‌ರಲ್ಲಿ ಇತ್ಯರ್ಥವಾಗದೇ ಹಾಗೆಯೇ ಉಳಿದಿದೆ. ಭಕ್ತಾದಿಗಳ ತೊಂದರೆಯನ್ನು ನಿವಾರಿಸಲು ಹಾಗೂ ದುರ್ಘಟನೆಗಳಾಗದಂತೆ ತಡೆಗಟ್ಟಲು ಕೂಡಲೇ ಸದರಿ ಅಂದಾಜನ್ನು ಮಂಜೂರು ಮಾಡಿ ಸ್ನಾನ ಘಟ್ಟವನ್ನು ಕೂಡಲೇ ನಿರ್ಮಿಸುವ ಕ್ರಮ ಕೈಗೊಳ್ಳ ಬೇಕಾಗಿದೆ ಎಂದು ಸರ್ಕಾರವನ್ನು ಒತ್ತಾಯಿಸಲು ಈ ಸೂಚನೆ ನೀಡಲಾಗಿದೆ

ಶ್ರೀ ಎ. ಲಕ್ಷ್ಮೀಸಾಗರ್ -- ನಾನು ಅವರಿಗೆ ಉತ್ತರವನ್ನು ಒದಗಿಸುತ್ತೇನೆ

(ii) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಜಮೀನನ್ನು ಅಕ್ರಮಣ ಮಾಡಿಕೊಂಡಿರುವುದನ್ನು ಸಕ್ರಮ ಮಾಡುವುದು.

ಶ್ರೀ ಕೆ. ಕುಶಾಲಪ್ಪ ಗೌಡ.- ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರಿ ಜಮೀನು, ಕುಮ್ಕಿ, ಫಾರೆಸ್ಟ್ ಫರ್ ಮುಂತಾದ ಜಮೀನುಗಳನ್ನು ೧೯-೫೦ನೇ ಇಸವಿಯಿಂದಲೂ, ಆಗ್ಗೆ ಮಾಡಿ ತೆಂಗು, ಅಡಿಕೆ, ಕೃಷಿ, ಬೆಳೆ, ಇನ್ನಿತರ ಕೃಷಿ ಮಾಡಿ ಜೀವಿಸಿಕೊಂಡು ಬರುತ್ತಿದ್ದಾರೆ. ಅಲ್ಲದೆ

ಆಗ್ಮೆ ಕೃತ ಮಾಡಿ ಕೃಷಿ ಕಾರ್ಮಿಕರು ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ಇದರಲ್ಲಿ ಸಣ್ಣ ರೈತ, ಅತೀ ಸಣ್ಣ ರೈತರು ಮುಂತಾದವರಿಗೆ ಯಾವುದೇ ಗೃಹ ನಿವೇಶನ ಮಂಜೂರು, ಡಿ ನೋಟೀಸು ವಗೈರೆ ಪಡೆಯದೆ ಸದ್ಯಯವರು ಹುಡ್ಕೊ ಮನೆಗಳನ್ನು, ಸರ್ಕಾರದ ಸವಲತ್ತುಗಳನ್ನು ಪಡೆಯಲು ಕೃಷಿ ಬಗ್ಗೆ ವಾಣಿಜ್ಯ ಬ್ಯಾಂಕುಗಳಿಂದಾಗಲೀ ಸರಕಾರಿ ಸಬ್ಸಿಡಿ ರಿಯಾಯಿತಿ ಯಂತಹ ಸೌಲಭ್ಯಗಳನ್ನು ಪಡೆಯದೆ ಇಂತಹವರ ಸ್ಥಿತಿಯು ನಿರ್ಗತಿಕವಾಗಿರುತ್ತದೆ. ಈ ಪ್ರಸ್ತಾಪಗಳನ್ನು ಸರಕಾರಕ್ಕೆ ಆಗಾಗ ಮನವಟ್ಟು ಮಾಡಿದರೂ ಸಹ ಸರಕಾರ ಈತನಕ ಯಾವುದೇ ಕ್ರಮ ಕೈಗೊಂಡಂತೆ ತಿಳಿದುಬರುವುದಿಲ್ಲ. ಆಲ್ಲದೆ ಕರ್ನಾಟಕ ಭೂ ಮಂಜೂರಾತಿ ಅಧಿನಿಯಮದಲ್ಲಿ ಕುಟುಂಬದ ಆದಾಯ ರೂ. ೨,೦೦೦ ರೂಪಾಯಿಂಗಳನ್ನು ಮಿಕ್ಕ ಬಾರದು ಎಂದು, ಇದ್ದು, ಈ ರೀತಿಯಿಂದ ಮಂಜೂರಾತಿ ಪಡೆಯಲು ಅಸಾಧ್ಯವಾಗಿದೆ. ಆಗ್ಮೆ ಭೂಮಿದಾರರಿಗೆ ಈ ಭೂ ಮಂಜೂರಾತಿ ಕುಟುಂಬ ಆದಾಯವನ್ನು ಲೆಕ್ಕಿಸಿದರೆ ಇವರಿಂದ ಆಗ್ಮೆದಾರರು ಭೂ ಮಂಜೂರಾತಿ ಪಡೆಯಲು ಸಾಧ್ಯವಿಲ್ಲ. ಇದನ್ನು ಭೂ ಮಂಜೂರಾತಿ ನಿಯಮದ ಆದಾಯವನ್ನು ಪರಿಗಣಿಸದೆ ಕಡಿಮೆ ಪಕ್ಷ ವಾರ್ಷಿಕ ಆದಾಯ ರೂ. ೪ ೮೦೦—ಎಂದು ಆದರೂ ಪರಿಗಣಿಸಬೇಕು. ಇದರಿಂದ ಬಡ ಆಗ್ಮೆದಾರರು ಬದುಕಲು ಸಹಾಯವಾಗುವುದು. ಆಲ್ಲದೆ ಈ ತನಕ ಅವಿದ್ಯಾವಂತ ಬಡ ಕೃಷಿ ಕಾರ್ಮಿಕರು ಆಗ್ಮೆ ಪಾಯಂ ಬಗ್ಗೆ ಅರ್ಜಿ ಸಲ್ಲಿಸದಂತೆ ಅವಧಿಯನ್ನು ಕೂಡಾ ವಿಸ್ತರಿಸಬೇಕೆಂದೂ ಮಂಜೂರಾತಿ ಅಧಿನಿಯಮದ ನಿರ್ಬಂಧ ಇದು ಓಬಿರಾಯನ ಕಾಲದ್ದು ಆಗಿದ್ದು ಇದನ್ನು ಸೂಕ್ತ ತಿದ್ದುಪಡಿಯೊಂದಿಗೆ ಬಡ ಆಗ್ಮೆದಾರರ ಜೀವನದ ದಾರಿಯನ್ನು ಅರಿತು ಸರಕಾರ ಕೂಡಲೇ ಆಗ್ಮೆ ಭೂಮಿ ಮಂಜೂರಾತಿ ಕ್ರಮ ಕೈಗೊಳ್ಳಬೇಕಾಗಿ ಸರಕಾರವನ್ನು ವಿನಂತಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಭೂಮಂಜೂರಾತಿ ಬಗ್ಗೆ ವಿವರ ಹೇಳಿದ್ದಾರೆ. ಸರ್ಕಾರ ಇದನ್ನು ಆಲೋಚನೆ ಮಾಡುತ್ತಾ ಇದೆ. ಈ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಒಂದು ನಿರ್ಣಯವನ್ನು ಬೇಗ ತೆಗೆದುಕೊಳ್ಳುತ್ತೇವೆ.

(iii) ಪುತ್ತೂರು ಕೈಗಾರಿಕಾ ತರಬೇತಿ ಕಾರ್ಯಗಾರ ಸ್ಥಗಿತಗೊಂಡಿರುವುದು.

ಶ್ರೀ ವಿನಯ ಕುಮಾರ್ ಸೊರಕೆ.—ಅಧ್ಯಕ್ಷರೇ, ಪುತ್ತೂರು ಕೈಗಾರಿಕಾ ತರಬೇತಿ ಕಾರ್ಯಾಗಾರವು ಜುಲೈ ೧ನೇ ತಾರೀಖಿನಿಂದ ಸ್ಥಗಿತಕೊಂಡಿದ್ದು, ವಿದ್ಯಾರ್ಥಿಗಳಿಗೆ ಪೆಚ್ಚಿನ ತೊಂದರೆ ಉಂಟಾಗಿದೆ. ಇದರ ಬಗ್ಗೆ ಅನೇಕ ದೂರುಗಳನ್ನು ಸ್ಥಳೀಯ ಹಿರಿಯ ಅಧಿಕಾರಿಗಳಿಗೂ ತಿಳಿಸಿದರೂ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ ವಿದ್ಯಾರ್ಥಿಗಳನ್ನು ಈ ಬಂದು ತರಬೇತಿ ಕಾರ್ಯಾಗಾರಕ್ಕೆ ಆಯ್ಕೆ ಮಾಡಿದ್ದು, ಸ್ಥಳೀಯ ಕಾರ್ಯಾಗಾರಕ್ಕೆ ಬೇಕಾಗುವಂತಹ ತರಬೇತಿಗೆ ಬೇಕಾಗುವಂತಹ ಸಲಕರಣೆಗಳು ಇಲ್ಲಿ ಇರುವುದಿಲ್ಲ. ಈ ತರಬೇತಿದಾರರಿಗೆ ಕೂಡ ಬೇಕಾದಂತಹ ಸ್ಟೈಫಂಡರಿ ಹಣವನ್ನು ಕೂಡ ಅಲ್ಲಿ ಕೊಟ್ಟಿರುವುದಿಲ್ಲ. ಇದನ್ನು ಸಂಬಂಧಪಟ್ಟ ಮಂತ್ರಿಗಳು ಸವಿಪದಿಸುವರೇ?

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ಸದಸ್ಯರಿಗೆ ವಿವರವಾದಂತಹ ಉತ್ತರವನ್ನು ಕಳುಹಿಸಿಕೊಡುತ್ತೇನೆ.

(iv) ತಿಪಟೂರು ತಾಲ್ಲೂಕು, ಹಾಲುಲ್ಕರ್ಕೆ ಸೇವಾ ಸಹಕಾರ ಸಂಘದ ಕಾರ್ಯದರ್ಶಿ ಶ್ರೀ ಟಿ. ಜಿ. ಆನಂದಮೂರ್ತಿ ಯವರು ಕಣ್ಮರೆಯಾಗಿರುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ತಿಪಟೂರು ತಾಲ್ಲೂಕು ಹಾಲುಲ್ಕರ್ಕೆ ಸೇವಾ ಸಹಕಾರ ಸಂಘದಲ್ಲಿ ಕಾರ್ಯದರ್ಶಿಯಾಗಿ ಕೆಲಸಮಾಡುತ್ತಿದ್ದ ಶ್ರೀ ಟಿ.ಜಿ. ಆನಂದ ಮೂರ್ತಿಯವರು ತಾ : ೩೦-೯-೧೯೮೫ರಿಂದ ಕಣ್ಮರೆಯಾಗಿದ್ದು ಇದುವರೆವಿಗೂ ಪತ್ತೆ ಇಲ್ಲದೆ ಅವರ ಕೊಲೆ ಆಗಿರಬಹುದೆಂದು ಶಂಕಿಸಿ ಅವರ ಪತ್ನಿಯವರು ಅನೇಕ ಪತ್ರಗಳನ್ನು ಸರ್ಕಾರಕ್ಕೆ ಬರೆದಿದ್ದು, ಈವರೆವಿಗೆ ಸರ್ಕಾರದಿಂದ ಯಾವುದೇ ಉತ್ತರ ಬಂದಿರುವುದಿಲ್ಲ.

ಪತ್ರಿಕೆಗಳಲ್ಲಿ ಈ ಬಗ್ಗೆ ಮುಖ ಪುಟದಲ್ಲಿ ಪ್ರಕಟವಾಗಿದ್ದು, ಮುಖ್ಯ ಮಂತ್ರಿಗಳಿಗೆ, ಗೃಹ ಖಾತೆ ಕಾರ್ಯದರ್ಶಿಯವರಿಗೆ ಲಿಖಿತ ದೂರನ್ನು ಕೊಟ್ಟರೂ ಅವರ ಪತ್ತೆ ಆಗದೆ ಅವರ ಶ್ರೀಮತಿಯವರು ಆತಂಕಗೊಂಡಿರುವ ಈ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.